**ಶಾಲೆಗಳಲ್ಲಿ ಮೊಬೈಲ್ ನಿಷೇಧಕ್ಕೆ ಗಂಭೀರ ಚಿಂತನೆ..!!**




**ಕಸ ಎಸೆದು ಬರುವುದಾಗಿ ಹೇಳಿ ರಾತ್ರಿ ಹೋದವಳು ಗೆಳೆಯನ ಜೊತೆ ಪರಾರಿ**




**ಮತ್ತೆ ಶಿಲಾಯುಗಕ್ಕೆ ಇರಾನ್ ಕಳಿಸ್ತೀವಿ : ಟ್ರಂಪ್..!!**




ಸ್ಕೂಲ್ ಮಾಸ್ಟರ್: ಗುಂಡ ದ್ರೌಪದಿಯ ವಸ್ತ್ರಾಪಹರಣ ಮಾಡಿದ್ದು ಯಾರು?
ಗುಂಡ: ಸರ್ ಕನ್ನಡ ಮೇಷ್ಟ್ರು ಬಂದಿರಲಿಲ್ಲ. ನಿನ್ನೆ ಹೆಡ್ ಮೇಷ್ಟ್ರು ಬಂದಿದ್ರು, ಬಹುಶಃ ಅವರೇ ಮಾಡಿ ಹೋಗಿರಬೇಕು.

***

ತಿಮ್ಮನ ಹೆಂಡತಿ ಚೀರುತ್ತಾ ಗಂಡನ ಬಳಿ ಹೀಗೆ ಹೇಳಿದಳು.
ಹೆಂಡತಿ: ಈ ಮನೆಯಲ್ಲಿ ಭೂತವಿದೆ. ನಾನು ಇಲ್ಲಿ ಇರಲಾರೆ.
ತಿಮ್ಮ: ಎಲ್ಲಿದೆಯೇ ಭೂತ?
ಹೆಂಡತಿ: ಹಿತ್ತಲಲ್ಲಿ ನನಗೆ ದೊಡ್ಡ ಕತ್ತೆಯ ಆಕಾರ ಕಾಣಿಸಿತು.
ಗುಂಡ: ಕತ್ತೆಯ ಆಕಾರವೇ? ಹುಚ್ಚಿ, ಹಿತ್ತಲಲ್ಲಿ ನಿಂತವನು ನಾನು ಕಣೆ?

***

ಹೆಂಡತಿ: ನನ್ನ ತಂಗಿ ಗಂಡಂಗೂ ನಿಮಗೂ ಏನ್ ಸಂಬಂಧ?
ಗಂಡ: ಒಂದೇ ಕಂಪನಿಯಿಂದ ಮೋಸ ಹೋದ ಇಬ್ಬರು ಗ್ರಾಹಕರು.

***

ಹೆಂಡತಿ: ನನಗೆ 10 ಸಾವಿರ ದುಡ್ಡು ಕೊಡಿ, ನಾನು ಶಾಪಿಂಗ್ ಮಾಡಬೇಕು.
ಗಂಡ: ಇದರಿಂದ ನನಗೇನು ಪ್ರಯೋಜನ?
ಹೆಂಡತಿ: ಇದರಿಂದ ನಿಮಗೂ ಲಾಭವಿದೆ, ನೀವು ಜೀವನ ಪೂರ್ತಿ ಕುಳಿತುಕೊಂಡು ಊಟ ಮಾಡಬಹುದು.
ಗಂಡ: ಹೌದಾ ತೆಗೆದುಕೋ.
ಹೆಂಡತಿ: ಶಾಪಿಂಗ್ ತುಂಬಾ ಚೆನ್ನಾಗಿತ್ತು ಕಣ್ರಿ.
ಗಂಡ: ನಾನು ನನ್ನ ಫ್ರೆಂಡ್ಸ್‌ಗಳಿಗೆಲ್ಲಾ ಹೇಳಿದ್ದೇನೆ. ನನ್ನ ಹೆಂಡತಿಯಿಂದ ಜೀವನ ಪೂರ್ತಿ ಕುಳಿತುಕೊಂಡು ಊಟ ಮಾಡಬಹುದು. ಕೆಲಸ ಬಿಟ್ಟರೂ ನಡೆಯುತ್ತೆ ಅಂತ. ಅದು ಇರಲಿ ಏನ್ ಶಾಪಿಂಗ್ ಮಾಡಿದೆ?
ಹೆಂಡತಿ: ತೆಗೆದುಕೊಳ್ಳಿ ಈ ಚೇರ್. ಯಾವಾಗಲೂ ನಿಂತೇ ಊಟ ಮಾಡುತ್ತೀರಲ್ಲ. ಈಗ ಕುಳಿತುಕೊಂಡು ಊಟ ಮಾಡಿ.

***

ಹೆಂಡತಿ: ಈಗೀಗ ದೂರದ ವಸ್ತು ಕಾಣಿಸುತ್ತಿಲ್ಲ. ಒಂದು ಕನ್ನಡಕ ಕೊಡಿಸಿ.
ಗಂಡ: ಕನ್ನಡಕನಾ... ಆಕಾಶದಲ್ಲಿ ಏನು ಕಾಣಿಸುತ್ತಿದೆ?
ಹೆಂಡತಿ: ಸೂರ್ಯ.
ಗಂಡ: ಇದಕ್ಕಿಂತ ದೂರದಲ್ಲಿ ನಿನಗೆ ಏನು ಕಾಣಿಸಬೇಕು?

***

ಗಂಡ: 30 ವರ್ಷದ ಹಿಂದೆ ನೀನು ಮಾಡುತ್ತಿದ್ದ ಅಡುಗೆಗೂ, ಈಗ ಮಾಡುತ್ತಿರುವ ಅಡುಗೆಗೂ ಸ್ವಲ್ಪ ವ್ಯತ್ಯಾಸವಿದೆ.
ಹೆಂಡತಿ: ಹೌದಾ? ಏನದು?
ಗಂಡ: ಆಗ ಅಡುಗೆಯಲ್ಲಿ ಕರಿ ಕೂದಲು ಸಿಗುತ್ತಿತ್ತು. ಈಗ ಬಿಳಿ ಕೂದಲು ಸಿಗುತ್ತಿದೆ.

***

ಆಕೆ: ಡಾಕ್ಟರ್ ಈಗ ನನ್ ಗಂಡನ ಕಂಡೀಷನ್ ಹೇಗಿದೆ?
ಡಾಕ್ಟರ್: ಈಗ ಪರವಾಗಿಲ್ಲಮ್ಮ. ನರ್ಸ್ ಬಂದಿದ್ದಾಳೆ. ಆಗಾಗ ಕಣ್ ಬಿಟ್ಟು ನೋಡ್ತಾ ಇರ್ತಾರೆ.

ಹೆಂಡತಿ ಬೀರುವಿನಲ್ಲಿದ್ದ ಟೀ ಶರ್ಟ್‌ಗಳನ್ನು ತೆಗೆದು ತೆಗೆದು ನೋಡಿ, ಹಾಗೇ ಇಡುತ್ತಿದ್ದಳು. ಅದನ್ನು ನೋಡಿದ ಗಂಡನಿಗೆ ಬೇಜಾರಾಗಿ, ನನ್ನ ಹೆಂಡತಿ ಬಳಿ ಒಳ್ಳೆಯ ಟೀ ಶರ್ಟ್ ಇಲ್ಲ ಎಂದುಕೊಂಡು ಒಂದು ಹೊಸ ಟೀ ಶರ್ಟ್ ತಂದುಕೊಟ್ಟ. ಖುಷಿಯಿಂದ ಹೆಂಡತಿ ಆ ಶರ್ಟ್ ಅನ್ನು ನೀರಿನಲ್ಲಿ ಹಿಂಡಿ ಮನೆ ಒರೆಸಲು ಹಾಕಿದಳು. ಅದನ್ನು ನೋಡಿ ಗಂಡ ತಬ್ಬಿಬ್ಬನಾದ.

***

ಲುಂಗಿ ಧರಿಸಿದ್ದ ಒಬ್ಬ ವ್ಯಕ್ತಿ ನೀಲಿ ಬಣ್ಣಕ್ಕೆ ತಿರುಗಿದ್ದ ತನ್ನ ಕಾಲು ತೋರಿಸಲು ಡಾಕ್ಟರ್ ಬಳಿ ಬಂದ. ಕಾಲು ಪರಿಶೀಲಿಸಿದ ಡಾಕ್ಟರ್, 'ಬಹುಶಃ ವಿಷ ಹರಡಿರಬೇಕು. ಕಾಲನ್ನು ಕತ್ತರಿಸಬೇಕಾಗುತ್ತೆ' ಎಂದು ಹೇಳಿ ಕತ್ತರಿಸಿಯೇ ಬಿಟ್ಟ. ಕೆಲವು ದಿನಗಳ ಬಳಿಕ ಎರಡನೇ ಕಾಲು ಕೂಡ ನೀಲಿಯಾಯಿತು. ಅದಕ್ಕೂ ವಿಷ ಹರಡಿದೆ ಎಂದು ಹೇಳಿ ಆ ಕಾಲನ್ನೂ ಕತ್ತರಿಸಿ ಕೃತಕ ಕಾಲುಗಳನ್ನು ಹಾಕಿದರು. ಅನಂತರ ಕೃತಕ ಕಾಲು ಕೂಡ ನೀಲಿಯಾಯಿತು. ಆಗ ಡಾಕ್ಟರ್, 'ಈಗ ನಿಮ್ಮ ಕಾಯಿಲೆ ಅರ್ಥವಾಯಿತು. ನೀವು ಧರಿಸಿದ ಲುಂಗಿ ಬಣ್ಣ ಬಿಡುತ್ತೆ. ಮೊದಲು ಅದನ್ನು ಬದಲಿಸಿ' ಎಂದ!

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು